ಗಳಾದ ಶ್ರೀ ಜೀವಿಜಯ ಅವರು ಲಿಖಿತ ಮೂಲಕ ಹೇಳಿಕೆ ಕೊಟ್ಟಿದ್ದಾನೆ. ಆದರೆ ಈತನಕ ಈ ಮೇಲಿನ ಹೇಳಿಕೆಯನ್ನು ಕಾರ್ಯಗತ ಮಾಡಿರುವುದಿಲ್ಲ. ಆದುದರಿಂದ ಈ ಮಾಜಿ ಸೈನಿಕರ ಸ್ಥಿತಿ ಶೋಚನೀಯವಾಗಿದ್ದು ಅವರಿಗೆ ಕೂಡಲೇ ಗೇಣಿ ಮಲೆಗಳನ್ನು ಪುನಃ ಕೊಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ಸನ್ಮಾನ್ಯ ಆರಣ್ಯ ಇಲಾಖೆಯ ಮಂತ್ರಿಗಳ ಗಮನಕ್ಕೆ ತಂದು ಈ ವಿಷಯದ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಕೇಳಿ ಕೊಳ್ಳುತ್ತೇನೆ.

12 ಹಸಿರು ಕಾರ್ಡಿನ ವಿತರಣೆಯಲ್ಲಿ ಆಗಿರುವ ಅನ್ಯಾಯಗಳು

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಸರಕಾರವು ಆರ್ಥಿಕವಾಗಿ ಹಿಂದುಳಿದಿರುವಂತಹ ಜನರಿಗೆ ಹಸಿರು ಕಾರ್ಡುಗಳನ್ನು ನೀಡಿ ಕೆಲವು ಅವಶ್ಯಕ ವಸ್ತುಗಳನ್ನು ನ್ಯಾಯ ಬೆಲೆ ಅಂಗಡಿಗಳ ಮೂಲಕ ಪಡೆಯುವಂತೆ ಮಾಡಿರುವುದು ಸರಿಯಷ್ಟೆ.

ಆದರೆ ಹಸಿರು ಕಾರ್ಡು ನೀಡಿರುವುದರಲ್ಲಿ ಈಗಾಗಲೇ ಅನೇಕ ಲೋಪದೋಷಗಳು ಉಂಟಾಗಿದ್ದು ಈಗಲೂ ಸಹ ಅರ್ಹರಿಗೆ ಹಸಿರು ಕಾರ್ಡು ಸಿಗದೆ, ಅನುಕೂಲಸ್ಥರಿಗೆ ಹಸಿರು ಕಾರ್ಡುಗಳು ಧಾರಾಳವಾಗಿ ದೊರೆಯುತ್ತಿದ್ದು ದುರುಪಯೋಗವಾಗುತ್ತಿದೆ. ಹಸಿರು ಕಾರ್ಡುಗಳನ್ನು ನೀಡುವಂತಹ ಸಂಬಂಧಪಟ್ಟ ಅಧಿಕಾರಿಗಳು ಹಸಿರು ಕಾರ್ಡು ನೀಡಿಕೆಗೆ ನೂರು ರೂಪಾಯಿಗಳಿಂದ ಇನ್ನೂರು ರೂಪಾಯಿವರೆಗೆ ಹಣ ಜನರಿಂದ ಸುಲಿಗೆ ಮಾಡಿ ಕಾರ್ಡು ನೀಡುತ್ತಿದ್ದಾರೆ. ಉದಾಹರಣೆಗೆ ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕಿನಲ್ಲಿ ಆರ್ಥಿಕವಾಗಿ ಹಿಂದುಳಿದವರು, ಹರಿಜನರು, ಜೀತ ವಿಮುಕ್ತರು, ದುರ್ಬಲ ವರ್ಗದವರು ಹಸಿರು ಕಾರ್ಡುಗಳನ್ನು ಪಡೆಯಲು ನೂರು ಇನ್ನೂರು ರೂಪಾಯಿಗಳನ್ನು ತೆತ್ತು ಕಾರ್ಡು ಪಡೆಯಬೇಕಾದ ಪರಿಸ್ಥಿತಿ ಉಂಟಾಗಿದೆ. ತಾಲ್ಲೂಕಿನ ಶ್ರೀಸಾಮಾನ್ಯ ಜನರು ಕಾರ್ಡು ಪಡೆಯಲು ಹೋಗಬೇಕಾದರೆ, ಹಣವಿಲ್ಲದ ಭಯಭೀತರಾಗಿ ಕಛೇರಿಗಳಿಗೆ ಹೋಗಬೇಕಾದ ಪರಿಸ್ಥಿತಿ ಉಂಟಾಗಿದೆ. ಆಶ್ಚರ್ಯವೆಂದರೆ ತಾಲ್ಲೂಕಿನಲ್ಲಿ ಹಸಿರು ಕಾರ್ಡುಗಳನ್ನು ನೀಡುವ ದುರ್ವ್ಯವಹಾರದಲ್ಲಿ ತಾಲ್ಲೂಕಿನ ಕಛೇರಿಗಳಲ್ಲಿ ಕೆಲಸ ಮಾಡುವ ಕೆಳ ಹಂತದ ಸಿಬ್ಬಂದಿವರ್ಗದವರು ಈ ಜಾಲದಲ್ಲಿ ಸೇರಿರುವುದರಿಂದಲೇ ಶ್ರೀಸಾಮಾನ್ಯನ ಪರಿಸ್ಥಿತಿ ಶೋಚನೀಯವಾಗಿದೆ.

ಜನತಾ ಪಕ್ಷದ ಸರ್ಕಾರವು ಜಾರಿಗೆ ತಂದಂತಹ ಇಂತಹ ಯೋಜನೆಗಳ ಮೇಲೆ ಸರಿಯಾದಂತಹ ನಿಗಾ ಇಡದಿರುವುದು, ದುರ್ವ್ಯವಹಾರದಲ್ಲಿ ತೊಡಗಿರುವ ಸಿಬ್ಬಂದಿಗಳಮೇಲೆ ಸರ್ಕಾರದ ಹಿಡಿತವಿಲ್ಲದಿರುವುದು. ಸರ್ಕಾರವು ಈ ದಿಸೆಯಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾಗಿದೆ. ಟಿ. ನರಸೀಪುರ ತಾಲ್ಲೂಕಿನಲ್ಲಿ ಈಗಾಗಲೇ ದುರ್ವ್ಯವಹಾರದಲ್ಲಿ ತೊಡಗಿರುವ ಜಾಲವನ್ನು ಪತ್ತೆ ಹಚ್ಚಿ ಕೂಡಲೇ ಕ್ರಮ ಕೈಗೊಳ್ಳಲು ಸರ್ಕಾರವನ್ನು ಈ ಮೂಲಕ ಆಗ್ರಹಪೂರ್ವಕವಾಗಿ ಒತ್ತಾಯಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಈ ಹಸಿರು ಕಾರ್ಡ್ ವಿತರಣೆಯಲ್ಲಿ ಅಲ್ಪಸ್ವಲ್ಪ ಲೋಪದೋಷಗಳಾಗಿವೆ. ಸರ್ಕಾರವು ಸುಮಾರು ೩೦ ಲಕ್ಷ ಬಡ ಕುಟುಂಬಗಳನ್ನು ಗುರ್ತಿಸಿ ಹಸಿರು ಕಾರ್ಡುಗಳನ್ನು ಹಂಚುವಲ್ಲಿ ಅಲ್ಪ ಸ್ವಲ್ಪ ಲೋಪದೋಷಗಳಾಗಿರಬಹುದು. ಇದನ್ನು ನಾನು ಒಪ್ಪುತ್ತೇನೆ ನಾವು ಈಗಾಗಲೇ ಈ ಲೋಪದೋಷಗಳನ್ನು ಸರಿಪಡಿಸಲು ಆದೇಶವನ್ನು ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಹಸಿರು ಕಾರ್ಡು ಹಂಚುವಲ್ಲಿ ಲಂಚ ತೆಗೆದುಕೊಂಡಿದ್ದಾರೆ ಎನ್ನುವುದು ಸತ್ಯಕ್ಕೆ ದೂರವಾದ ವಿಚಾರ ಹಾಗೇನಾದರೂ ಗುರುತರವಾದ ಆಪಾದನೆಗಳು ಇದ್ದರೆ ಅದನ್ನು ಲಿಖಿತ ಮೂಲಕ ಕೊಟ್ಟರೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

13 ಸಣ್ಣ ಗೇಣಿ ರೈತರ ಜಮೀನುಗಳನ್ನು ಹರಾಜು ಹಾಕುವುದನ್ನು ನಿಲ್ಲಿಸುವುದು

ಶ್ರೀ ಬಿ. ಧರ್ಮಪ್ಪ —ಸನ್ಮಾನ್ಯ ಅಧ್ಯಕ್ಷರೇ ಈಗಾಗಲೇ ಸಣ್ಣ ಹಿಡುವಳಿಯ ಗೇಣಿ ರೈತರಿಗೆ ಪರಿಹಾರದ ಕಂತುಗಳನ್ನು ಕಟ್ಟುವುದನ್ನು ರದ್ದು ಮಾಡಿರುವುದು ಸರಿಯಷ್ಟೇ ಆದರೆ, ಸರ್ಕಾರದವರು ಸಣ್ಣ ಹಿಡುವಳಿ ಗೇಣಿ ರೈತರು ಸಾಗುವಳಿ ಮಾಡುತ್ತಿರುವ ಜಮೀನನ್ನು ಆಳತೆ ಮಾಡಿ ವಿನಾಯ್ತಿ ಪಡೆದ

ಗೇಣಿ ರೈತರನ್ನು ಗುರ್ತಿಸಿರುವುದಿಲ್ಲ. ಹಾಗೆಯೇ ಪರಿಹಾರದ ಕಂತು ಕಟ್ಟುವವರಿಗೂ ಅವರು ಕಟ್ಟಲೇ ಬೇಕೆಂದು ತಿಳುವಳಿಕೆ ಕೊಟ್ಟಿರುವುದಿಲ್ಲ. ಪರಿಸ್ಥಿತಿ ಹೀಗಿದ್ದು ಯಾರೂ ಪರಿಹಾರದ ಕಂತುಗಳನ್ನು ಕಟ್ಟುತ್ತಿಲ್ಲ. ಈ ಮಧ್ಯೆ ಈಗಾಗಲೇ ಬಹಳ ಜನ ಸಣ್ಣ ಗೇಣೀ ರೈತರಿಗೆ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ಕೊಡಿಸಿ ಈಗ ಅದು ಬಾಕಿಯಾಗಿದೆ, ಇದೆಲ್ಲ. ನಡೆದದ್ದು ಸರ್ಕಾರದ ಆದೇಶದಂತೆ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನವರು ತಮಗೆ ಯಾವುದೇ ಸರ್ಕಾರದ ಆದೇಶವಿಲ್ಲವೆಂದು ತಿಳಿಸುತ್ತಾ ಸದರೀ ಸಣ್ಣ ಗೇಣಿ ರೈತರಿಗೆ ನೋಟೀಸು ಕೊಟ್ಟಿದ್ದು, ಈಗಾಗಲೇ ಜಪ್ತಿಗೂ ಮತ್ತು ಹರಾಜಿಗೂ ನೋಟೀಸುಗಳು ಬಂದು ರೈತರು ಕಂಗಾಲಾಗಿದ್ದಾರೆ, ಅವರು ನಿಜವಾಗಿಯೂ ಹಣ ಕಟ್ಟ ಬೇಕಾಗಿಲ್ಲ. ನಾನೇ ಸ್ವತಃ ಪರೀಕ್ಷಿಸಿದ್ದೇನೆ. ಸರ್ಕಾರದವರು ಈ ವಿಷಯದಲ್ಲಿ ಎಲ್ಲ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಕೂಡಲೇ ತಿಳುವಳಿಕೆ ಕೊಟ್ಟು ಅವರ ಜಮಾನು ಹರಾಜಾಗುವುದನ್ನು ನಿಲ್ಲಿಸಿಕೊಡಬೇಕಾಗಿ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ ೧೦ ಎಕರೆ ಒಳಗೆ ಯಾರು ಪ್ರೀಮಿಯಮ್ ಕಟ್ಟಬೇಕಾಗಿತ್ತೋ, ಅದನ್ನು ವಜಾ ಮಾಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ ಅಂದರೆ ಯಾರು ಸರ್ಕಾರದಲ್ಲಿ ಬಾಕಿ ಉಳಿಸಿಕೊಂಡಿದ್ದರೋ ಅದನ್ನು ವಜಾ ಮಾಡಿದ್ದಾರೆ ಆದರೆ ಯಾರು ಸಾಲ ಸೋಲ ಮಾಡಿ ಹಣ ತೀರಿಸಿದ್ದಾರೆ ಅಂಥಾದ್ದನ್ನು ವಜಾ ಮಾಡುತ್ತೇವೆಂದು ಹೇಳಿಲ್ಲ. ಈ ಬಗ್ಗೆ ಈ ಸದನದಲ್ಲಿ ೨-೩ ಸಾರಿ ಕ್ಲಾರಿಫೈ ಮಾಡಿದ್ದೇನೆ. ಸಂಬಂಧಪಟ್ಟ ಕಂದಾಯ ಮಂತ್ರಿಗಳು ಕ್ಲಾರಿಫೈ ಮಾಡಿದ್ದಾರೆ. ಈಗ ಸ್ಥಿತಿ ಏನಾಗಿದೆ ಎಂದರೆ ಈ ಭೂ ಅಭಿವೃದ್ಧಿ ಬ್ಯಾಂಕ್‌ಗೆ ೫-೬ ವರ್ಷದಿಂದ ರೈತರು ಸುಮಾರು ೧೧ ಕೋಟಿ ರೂಪಾಯಿಯಷ್ಟು ಹಣವನ್ನು ಸಾಲ ಮಾಡಿ ತುಂಬಿದ್ದಾರೆ ಅದನ್ನು ಬಿಡಿ ಎಂದರೆ ಬಹಳ ಕಷ್ಟವಾಗುತ್ತದೆ, ಈಗ ಇದನ್ನೇ ತಡೆದುಕೊಳ್ಳುವುದು ಕಷ್ಟವಾಗಿದೆ. ಈಗ ಇನ್ನೂ ಔಟಲೇ ೭ ಕೋಟಿ ರೂಪಾಯಿ ಬರಬೇಕಾಗಿದೆ. ಆ ಬಗ್ಗೆ ವಸೂಲ್ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದನ್ನೂ ವಸೂಲ್ಮಾಡಬೇಡಿ ಎಂದರೆ ಯಾವ ಅಭಿವೃದ್ಧಿ ಬ್ಯಾಂಕ್ ಕೂಡ ಕೆಲಸ ಮಾಡುವುದಕ್ಕಾಗುವುದಿಲ್ಲ. ಜೊತೆಗೆ ಇನ್ನೇನಾಗಿದೆ ಎಂದರೆ ನಬಾರ್ಡ್‌ನವರಿಗೂ, ಪಲ್ರ್ಡ ಬ್ಯಾಂಕ್‌ನವರಿಗೂ ಇದರ ಬಗ್ಗೆ ಒಂದು ಒಪ್ಪಂದವಾಗಿದೆ. ಆದುದರಿಂದ ಈಗ ಬಾಕಿ ಇರುವ ದುಡ್ಡನ್ನು ವಸೂಲ್ಮಾಡಬೇಕಾಗಿದೆ. ಹಾಗೆ ವಸೂಲ್ಮಾಡದೇಹೋದರೆ ಮುಂದೆ ಹಾಗೆ ಅವರಿಂದ ಯಾವ ವಿಧನಾದ ಸಹಾಯವೂ ಸಿಕ್ಕುವುದಿಲ್ಲ ಮುಂದೆ ನಾವೇನಾದರೂ ಒಂದು ಮೈನರ್ ಇರಿಗೇಷನ್ ಕೆಲಸ ಮಾಡುವುದಕ್ಕಾಗಲೀ ಅಥವಾ ಇನ್ನು ಇತರೇ ಕೆಲಸಕಾರ್ಯಗಳನ್ನು ಮಾಡುವುದಕ್ಕಾಗಲಿ ಹಣ ಬೇಕಾದರೆ ಅವರಿಗೆ ಹಣ ಸಿಕ್ಕುವುದಿಲ್ಲ. ಆದುದರಿಂದ ಮಾನ್ಯ ಸದಸ್ಯರುಗಳು ಈ ವಸೂಲಿ ಕ್ರಮಕ್ಕೆ ದಯವಿಟ್ಟು ಸಹಕರಿಸಬೇಕು ಎಂದು ಹೇಳುತ್ತೇನೆ. ಜೊತೆಗೆ ಈಗ ಯಾರೂ ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಸಾಲ ಪಡೆದುಕೊಂಡು ಆ ಹಣವನ್ನು ತೀರಿಸಿದ್ದಾರೆ, ಅದನ್ನು ವಜಾ ಮಾಡುವುದಕ್ಕಾಗುವುದಿಲ್ಲ ಎಂದು ನಾನು ಮತ್ತೊಮ್ಮೆ ಸ್ಪಷ್ಟವಾಗಿ ತಿಳಿಸಬಯಸುತ್ತೇನೆ.

14 ಪುತ್ತೂರಿನ ಸರ್ಕಾರಿ ಪದವಿಪೂರ್ವ ಕಾಲೇಜನ್ನು ಪ್ರಥಮ ದರ್ಜೆ ಕಾಲೇಜಾಗಿ ಪರಿವರ್ತಿಸುವುದು

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡದ ಪುತ್ತೂರು ಕಂದಾಯ ಉಪ ವಿಭಾಗದ ಮುಖ್ಯ ಸ್ಥಳ. ಕೈಗಾರಿಕೆ ವಾಣಿಜ್ಯ, ಕೃಷಿ ಇತ್ಯಾದಿ ರಂಗಗಳಲ್ಲಿ ವೇಗವಾಗಿ ಬೆಳೆಯುತ್ತಿರುವ ಪಟ್ಟಣ. ಇರುವ ಕಾಲೇಜುಗಳಲ್ಲಿ ಸಾಕಷ್ಟು ಸ್ಥಳವಕಾಶ ಇಲ್ಲ. ಆದ್ದರಿಂದ ಪುತ್ತೂರಿನ ಸರ್ಕಾರೀ ಪದವಿ ಪೂರ್ವ ಕಾಲೇಜನ್ನು ಸರ್ಕಾರೀ ಪ್ರಥಮ ದರ್ಜೆ ಕಾಲೇಜಾಗಿ ಪರಿವರ್ತಿಸಬೇಕಾಗಿದೆ ಎಂದು ಅಲ್ಲಿನ ಜನತೆಯ ಬಹಳ ದಿನಗಳ ಆಶಯ. ಹಾಗೆಯೇ ಅಲ್ಲಿನ ಸರ್ಕಾರೀ ಹೈಯ್ಯರ್ ಪ್ರೈಮರಿ ಎಲಿಮೆಂಟರಿ ಶಾಲೆಯನ್ನು ಪದವಿ ಪೂರ್ವ ಕಾಲೇಜಿಗೆ ಬಿಡ್ತಿಗೊಳಿಸಬೇಕೆಂಬುದೂ ಜನತೆಯ ಬೇಡಿಕೆ. ಹೀಗಾದಲ್ಲಿ ಇರುವ ಸ್ಥಳಾವಕಾಶದಲ್ಲಿಯೇ ಹೆಚ್ಚಿನ ಶೈಕ್ಷಣಿಕ, ಸೌಲಭ್ಯಗಳಿಗೆ ಪುತ್ತೂರು ಹಾಗೂ ಅಸು ಪಾಸಿನ ಜನತೆಗೆ ನೀಡಿದಂತಾಗುತ್ತದೆ. ಈ ವಿಚಾರದಲ್ಲಿ ಆದಷ್ಟು ಬೇಗ ಸೂಕ್ತ ಮಂಜೂರಾತಿ ನೀಡ ಬೇಕಾಗಿ ಸರಕಾರವನ್ನು ತಮ್ಮ ಮುಖಾಂತರ ಒತ್ತಾಯಿಸುತ್ತೇನೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪದವಿ ಪೂರ್ವ ಕಾಲೇಜನ್ನು ಸರ್ಕಾರೀ ಪ್ರಥಮ ದರ್ಜೆ ಕಾಲೇಜಾಗಿ ಮಾಡಬೇಕೆಂದು ಹೇಳಿದ್ದಾರೆ: ಪುತ್ತೂರಿನಲ್ಲಿ ಈಗಾಗಲೇ ಖಾಸಗಿ